# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ
# ಮಾಗಡಿ
## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 1966 / 2023

**ಚಾಸಾ ಃ- 04 / ಪ್ರಾಸಾ ಃ- 07**

| | |
|---|---|
| ಹೆಸರು | ರೇಣುಕಾ ಪ್ರಸಾದ್ |
| ತಂದೆ ಹೆಸರು | ಗುರುಸ್ವಾಮಿ |
| ವಯಸ್ಸು | 26 |
| ಉದ್ಯೋಗ | ವ್ಯಸಾಯ |
| ವಿಳಾಸ | ಅಜ್ಜನಹಳ್ಳಿ |

**ದಿನಾಂಕಃ 10.07.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಈಗ ಸಾಕ್ಷಿಗೆ ನಿಪಿ-2 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು 2 ವರ್ಷಗಳ ಹಿಂದೆ ಹೊಸಪೇಟೆ ಸರ್ಕಲ್ ಬಳಿ ಮಾಡಿರುತ್ತೇನೆ. ನಂಜುಂಡಯ್ಯ ಮತ್ತು ನರಸೇಗೌಡ ಜಗಳ ಮಾಡಿಕೊಂಡು ಹಲ್ಲೆ ಮಾಡಿರುತ್ತಾರೆ ಎಂಬ ಸಂಬಂಧ ಸದರಿ ಸ ಹಿಯನ್ನು ಮಾಡಿರುತ್ತೇನೆ. ಸದರಿ ಮಹಜರನ್ನು ಸಂಜೆ 4.30 ರಿಂದ 5.00 ಗಂಟೆ ವರೆಗೆ ಜರುಗಿಸಿರುತ್ತಾರೆ. ಪಂಚನಾಮೆಯ ಕಾಲದಲ್ಲಿ ಪೋಲಿಸರು ಹೆಲ್ಮೆಟ್ ಅನ್ನು ವಶಪಡಿಸಿಕೊಂಡಿರುತ್ತಾರೆ. ಈಗ ಸಾಕ್ಷಿಗೆ ಮುದ್ದೆ ಮಾಲು 1 ಅನ್ನು ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ವಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 17.02.2023 ರಂದು ಪೋಲಿಸರು ಪಂಚನಾಮೆಯನ್ನು ಸಂಜೆ 4.00 ರಿಂದ 4.30 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಗೆ ನೀವು ನಂಜುಂಡಯ್ಯ ಮತ್ತು ಭೈಲಯ್ಯ ಸಹಿ ಮಾಡಿುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತಾತರೆ. ಪಂಚನಾಮೆಯ ಸಮಯದಲ್ಲಿ ಪೋಲಿಸರು ನಿಮ್ಮ ಸಮಕ್ಷಮ ನಿಪಿ-3 ರಂತೆ ಪೋಟೋ ತೆಗೆದಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು** ಃ- **ಶ್ರೀ. ವಿ ಎಲ್ ಎನ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ನಿಮಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ 2 ರವರು ನಿಮ್ಮ ಸಂಬಂಧಿಕರು ಎಂದರೆ ಸಾಕ್ಷಿ ಅಲ್ಲ ನಮ್ಮ ಪಕ್ಕದ ಊರಿನವರು ಎಂದು ನುಡಿಯುತ್ತಾರೆ. ನಿಪಿ-3 ರಲ್ಲಿ ಕಾಣುವ ಸ್ಥಳವು ಹೊಸಪೇಟೆ ಸರ್ಕಲ್ ಅಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಹಜರ್ ಗೆ ಹಾಜರಾಗಲು ಪೋಲಿಸರು ನಿಮಗೆ ನೋಟಿಸ್ ಕೊಟ್ಟಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಏನೆಲ್ಲಾ ಬರೆದಿದೆ ಎಂದು ನಿಮಗೆ ನಿರ್ದಿಷ್ಟವಾಗಿ ಗೊತ್ತಿದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಮುದ್ದೆಮಾಲು 1 ಅನ್ನು ತೋರಿಸಿ ಸದರಿ ಮುದ್ದೆಮಾಲು ಕಪ್ಪು ಬಣ್ಣದ ಹೆಲ್ಮೆಟ್ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಸಮಕ್ಷಮ ಜಪ್ತಿ ಪಡಿಸಿದ ಹೆಲ್ಮೆಟ್ ನ ವಿಶೇಷ ಗುರುತು ಇಟ್ಟುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಆರೋಪಿಯ ತಂದೆ ಮತ್ತು ಚಿಕ್ಕಪ್ಪ ನಿಮ್ಮ ಮತ್ತು ಚಾಸಾ 2 ರವರ ವಿರುದ್ದ ಒಂದು ದೂರನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಪ್ರಕರಣದ ನಂಬರ್ 4484/2023 ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನೀವು 7 ನೇ ಆರೋಪಿ ಎಂದರೆ ಸಾಕ್ಷಿ ಎಷ್ಟು ಎಂದು ಗೊತ್ತಿರುವುದಿಲ್ಲ ಆದರೆ ಆರೋಪಿ ಎಂದು ನುಡಿಯುತ್ತಾರೆ. ನೀವು ಮತ್ತು ಪಿರ್ಯಾದುದಾರರು ಸಂಬಂಧಿಕರು ಇದ್ದು ನಿಮ್ಮ ವಿರುದ್ದ ದೂರನ್ನು ಕೊಟ್ಟಿರುವುದರಿಂದ ಸುಳ್ಳು ಮಹಜರ್ ಗೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಮತ್ತು ಚಾಸಾ 2 ರವರು ಮುದ್ದೆಮಾಲು 1 ಅನ್ನು ಸೃಷ್ಟಿಸಿಕೊಂಡು ಮಹಜರ್ ಅನ್ನು ಸೃಷ್ಟಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಪೋಲಿಸ್ ಠಾಣೆಯಲ್ಲಿ ಬರೆದ ಮಹಜರ್ ಗೆ ನೀವು ಸಹಿ ಹಾಕಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**